# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಘನತ್ಯಾಜ್ಯ) ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ, ಎನ್. ಆರ್. ವೃತ್ತ, ಬೆಂಗಳೂರು-560002.

ಸಂಖ್ಯೆ: ವಿಆ/ಘತ್ಯಾನಿ/ಪಿಆರ್/ 702 /20-21 ದಿನಾಂಕ: 30.07.2020

## ಕಛೇರಿ ಆದೇಶ

**ವಿಷಯ:-** ಜುಲೈ-2020 ಮಾಹೆಯಿಂದ ಅಕ್ಟೋಬರ್-2020ರವರೆವಿಗೂ ಪ್ರಾರಂಭವಾಗುವ ಸಾಲು ಸಾಲು ಹಬ್ಬಗಳ ಆಚರಣೆಯಿಂದ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ತ್ಯಾಜ್ಯವನ್ನು ವಿಲೇವಾರಿಗೊಳಿಸಲು ಕ್ರಮವಹಿಸುವುದರ ಕುರಿತು.

******

ಈ ವರ್ಷದ ಜುಲೈ-2020 ಮಾಹೆಯಿಂದ ಪ್ರಾರಂಭವಾಗುವ ಸಾಲು ಸಾಲು ಹಬ್ಬಗಳಾದ ವರಮಹಾಲಕ್ಷ್ಮೀ, ಬಕ್ರೀದ್, ಸ್ವರ್ಣಗೌರಿ ವ್ರತ, ಗಣೇಶ ಚತುರ್ಥಿ, ಆಯುಧಪೂಜೆ, ಈದ್‌ಮಿಲಾದ್, ವಿಜಯದಶಮಿ, ನರಕ ಚತುರ್ದಶಿ, ಬಲಿಪಾಡ್ಯಮಿ ಹಬ್ಬಗಳು ಅಕ್ಟೋಬರ್-2020ರವರೆವಿಗೂ ಬರುತ್ತಿರುವ ಹಿನ್ನಲೆಯಲ್ಲಿ, ಸದರಿ ಹಬ್ಬಗಳ ಆಚರಣೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಉತ್ಪತ್ತಿಯಾಗುವ ಹೆಚ್ಚುವರಿ ತ್ಯಾಜ್ಯವನ್ನು ವಿಲೇವಾರಿಗೊಳಿಸಲು ಪಾಲಿಕೆಯವತಿಯಿಂದ ಸೂಕ್ತ ಕ್ರಮವಹಿಸಬೇಕಿರುತ್ತದೆ.

ಪಾಲಿಕೆಯ ವ್ಯಾಪ್ತಿಯಲ್ಲಿ ಕರೋನಾ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿರಾಜ್ಯ ಸರ್ಕಾರವು ಮೇಲ್ಕಂಡ ಹಬ್ಬ, ಉತ್ಸವಗಳನ್ನು ಪೂಜೆ, ಧಾರ್ಮಿಕ ವಿಧಿವಿಧಾನಗಳಿಗಷ್ಟೆ ಸೀಮಿತಗೊಳಿಸಲು ನಿರ್ಧರಿಸಿದ್ದು, ಈ ಕುರಿತಂತೆ ಒಂದೆರಡು ದಿನಗಳಲ್ಲಿ ಅಧಿಕೃತ ಸುತ್ತೋಲೆಗಳು ಬಿಡುಗಡೆಯಾಗಲಿದೆ.

ಕೋವಿಡ್-2019 ತುರ್ತು ಪರಿಸ್ಥಿತಿಯ ಹಿನ್ನಲೆಯಲ್ಲಿ ಬೆಂಗಳೂರು ನಗರ ಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ತಮ್ಮತಮ್ಮ ಊರುಗಳಿಗೆ ತೆರಳಿದ್ದು, ಸರ್ಕಾರದವತಿಯಿಂದ ಹಬ್ಬ ಹರಿದಿನಗಳನ್ನು ಮನೆಗಳಲ್ಲಿಯೇ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅತೀ ಸರಳತೆಯಿಂದ ಆಚರಣೆ ಮಾಡಲು ಸೂಚನೆಗಳನ್ನು ನೀಡಲಾಗುತ್ತಿದ್ದು, ಕೆಲವೊಮ್ಮೆ ಭಾನುವಾರದಂದು ಕರ್ಫ್ಯೂ ಸಹ ವಿಧಿಸಲಾಗುತ್ತಿರುವುದರಿಂದ ಹಾಗೂ ಕೋವಿಡ್-2019 ಪ್ರಕರಣಗಳು ಕಂಡು ಬರುವ ಪ್ರದೇಶಗಳಲ್ಲಿ ಸೀಲ್‌ಡೌನ್ ಮಾಡಲಾಗುತ್ತಿರುವುದರಿಂದ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರ ಜನದಟ್ಟಣೆ ಕಡಿಮೆಗೊಂಡು ವ್ಯಾಪಾರ, ವಹಿವಾಟುಗಳು ಈ ಹಿಂದಿನ ವರ್ಷಕ್ಕಿಂತಲೂ(ಶೇ.50ರಷ್ಟು) ಕಡಿತಗೊಳ್ಳುವ ಸಾಧ್ಯತೆಯಿರುತ್ತದೆ.

ಬಕ್ರೀದ್ ಹಬ್ಬದ ಪ್ರಯುಕ್ತ ಉತ್ಪತ್ತಿಯಾಗುವ ಪ್ರಾಣಿತ್ಯಾಜ್ಯವನ್ನು ಸಾಗಣೆ ಮಾಡಲು ಹೆಚ್ಚಿನ ವಾಹನಗಳು ಅವಶ್ಯವಿದ್ದಲ್ಲಿ, ಈ ಕುರಿತಂತೆ ಖರ್ಚುವೆಚ್ಚಗಳ ಕುರಿತು ಮಿತವ್ಯಯಅಂದಾಜು ಮಾಡಿ, ಹಬ್ಬಕ್ಕೆ ಮುಂಚಿತವಾಗಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ತ್ಯಾಜ್ಯ ಸಂಗ್ರಹಣೆ ಮಾಡಿ ಕೋಗಿಲು ಬಂಡೆಯಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದು. ವಿಲೇವಾರಿಗೊಳಿಸುವ ಪ್ರತಿ ವಾಹನದ ಜಿಯೋ ಲೊಕೇಶನ್ ಒಳಗೊಂಡ ಪೋಟೋಗಳನ್ನಾಧರಿಸಿ ಬಿಲ್ ಪಾವತಿಗಾಗಿ ಶಿಫಾರಸ್ಸು ಮಾಡಲು ಕ್ರಮವಹಿಸಲು ಸೂಚಿಸಿದೆ.

ಮುಂದುವರೆದು ವರಮಹಾಲಕ್ಷ್ಮೀ, ಸ್ವರ್ಣಗೌರಿ ವ್ರತ, ಗಣೇಶಚತುರ್ಥಿ, ಆಯುಧಪೂಜೆ, ವಿಜಯದಶಮಿ, ನರಕ ಚತುದರ್ಶಿ, ಬಲಿಪಾಡ್ಯಮಿ ಹಬ್ಬಗಳ ಆಚರಣೆಯಿಂದ ಉತ್ಪತ್ತಿಯಾಗುವ ಹಸಿತ್ಯಾಜ್ಯವನ್ನು ವಿಲೇವಾರಿಗೊಳಿಸಲು ಹಾಲಿ ಲಭ್ಯವಿರುವ ವಾಹನಗಳನ್ನೇ ಬಳಸುವುದು, ಒಂದೊಮ್ಮೆ ಹೆಚ್ಚಿನ ವಾಹನಗಳು ಮಾರುಕಟ್ಟೆ ಪ್ರದೇಶಗಳಿಗೆ ಅವಶ್ಯವಿದ್ದಲ್ಲಿ ಹಬ್ಬಕ್ಕೆ ಮುಂಚಿತವಾಗಿ ಸಮುಚಿತ ಮಾರ್ಗದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ತ್ಯಾಜ್ಯ ಸಂಗ್ರಹಣೆ ಮಾಡಿ ವಲಯಗಳಿಗೆ ನಿಯೋಜಿಸಿರುವ ಸಂಸ್ಕರಣಾ ಘಟಕಗಳಲ್ಲಿ ವಿಲೇವಾರಿಗೊಳಿಸಲು ಸೂಚಿಸಿದೆ.

30/7/2020

ವಿಶೇಷ ಆಯುಕ್ತರು(ಘತ್ಯಾನಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರಿಗೆ,**

1. ವಲಯಗಳ ಜಂಟಿಆಯುಕ್ತರು.
2. ವಲಯಗಳ ಅಧೀಕ್ಷಕಅಭಿಯಂತರರು.
3. ವಿಭಾಗಗಳ ಸಹಾಯಕಕಾರ್ಯಪಾಲಕಅಭಿಯಂತರರು (ಘತ್ಯಾನಿ).

Scanned with CamScanner